Indian Journal of History and Archaeology

ISSN (E):2582-225X
VOL-2, ISSUE -1, MAY -JUNE, 2020, 12-19

# ಸಮಕಾಲೀಕ ಸಂದರ್ಭದಲ್ಲಿ ಜೈನಧರ್ಮದ ಪ್ರಸ್ತುತತೆ

**ಡಾ.ಪ್ರೇಮಪಲ್ಲವಿ. ಸಿ.ಬಿ.**

**ಡಾ.ಪ್ರೇಮಪಲ್ಲವಿ. ಸಿ.ಬಿ.**
ಕನ್ನಡ ಸಹಾಯಕ ಪ್ರಾಧ್ಯಾಪಕರು,
ಸರ್ಕಾರಿ ಕಲಾ ಕಾಲೇಜು(ಸ್ವಾಯತ್ತ),
ಚಿತ್ರದುರ್ಗ –577501,

ಮಾನವ ಕುಲದ ವಿಕಾಸವು ಇತಿಹಾಸದೊಂದಿಗೆ ತಳುಕುಹಾಕಿಕೊಂಡು ಬಂದಿರುವ ಪ್ರಮುಖ ಅಂಶ ಹಾಗೂ ಪದವೆಂದರೆ; ಅದುವೇ ಧರ್ಮ. ಜಗತ್ತಿನಲ್ಲಿ ಜೀವಿಗಳಿಗೆ ಸುಖವೂ ಲಭಿಸಬೇಕಾದರೆ ಧರ್ಮವನ್ನು ಪಾಲಿಸಬೇಕು. ಅಂಥ ಧರ್ಮ ಯಾವುದೆಂದರೆ; ಜೀವಿಗಳ ಕರ್ಮವನ್ನು ಕಳೆದು ಸುಖದಲ್ಲಿ ಇರಿಸುವುದೇ ಧರ್ಮ. ಅದೇ ನಿಜವಾದ ಸುಖ. ನಿಜವಾದ ಜ್ಞಾನ. 'ಮನುಷ್ಯ ನಿಜವಾಗಿ ಏನಾಗಿದ್ದಾನೆಯೋ ಅದರ ಅತ್ಯುತ್ತಮ ಅಭಿವ್ಯಕ್ತಿಯೇ ಧರ್ಮ. ಮನುಷ್ಯನ ಸಾಂಘಿಕ ಜೀವನದಲ್ಲಿ ಅಭಿವ್ಯಕ್ತಿಗೊಂಡ ಧರ್ಮವೇ ಸಂಸ್ಕೃತಿ' ಎಂದು ರವೀಂದ್ರನಾಥ ಅವರು ಅಭಿಪ್ರಾಯಪಡುತ್ತಾರೆ.

ಮನುಷ್ಯನಿಗೆ ಹಿತವಾದುದ್ದೇ ಧರ್ಮ ಎಂಬರ್ಥವೂ ಈ ಅಭಿಪ್ರಾಯಲ್ಲಿದೆ. ಧರ್ಮ ಎಂಬ ಪದಕ್ಕೆ ಖಚಿತವಾದ ಅರ್ಥವನ್ನು ಹೇಳುವುದು ಕಷ್ಟಸಾಧ್ಯ. ನ್ಯಾಯ, ಸದ್ಗುಣ, ಪುಣ್ಯ, ಆಚಾರ, ಅಹಿಂಸೆ, ಭಿಕ್ಷೆ, ಸ್ವಭಾವ, ಆಚಾರ, ಆಚರಣೆ, ಹಕ್ಕು, ಸ್ವರೂಪ, ಸಮದೃಷ್ಠಿ, ಕರ್ತವ್ಯ, ನಡವಳಿಕೆಯಂಥ ವಿಕಾಸಿತ ಅರ್ಥವನ್ನು ಧರ್ಮ ಎಂಬ ಪದದಲ್ಲಿ ಗುರುತಿಸಬಹುದು. ಒಳ್ಳೆಯ ಬಾಳನ್ನು ಬಾಳಬೇಕೆಂಬುದೇ ಧರ್ಮ ಅಥವಾ ಜನರನ್ನು ಒಗ್ಗೂಡಿಸಿ ಪರಸ್ಪರ ಸಹಕಾರದಿಂದ ಬಾಳುವಂತೆ ಪ್ರೇರೆಪಿಸುವ ಶಕ್ತಿಯೇ ಧರ್ಮ. ಒಟ್ಟಾರೆಯಾಗಿ ಹೇಳುವುದಾದರೆ; ಮಾನವನ ಬದುಕಿನ ಅತ್ಯುತ್ತಮವಾದ ಮನೋಧರ್ಮ. ಇಡೀ ಮಾನವ ಬದುಕಿನ ಅರ್ಥಪೂರ್ಣಸತ್ವದ ಅವಿಭಾಜ್ಯ ಸಂಕೇತವೇ ಧರ್ಮವಾಗಿರುತ್ತದೆ.

ಹಿಂದೂ ಧರ್ಮದ ವಾದ, ತತ್ವ, ಸಿದ್ಧಾಂತವನ್ನು ತಿರಸ್ಕರಿಸುತ್ತಾ; ಹಿಂದೂ ಧರ್ಮದಿಂದ ಬೇರೆಯಾಗಿ ಸಂಪೂರ್ಣ ಹೊಸ ಧರ್ಮವಾಗಿ ರೂಪಗೊಂಡ ಧರ್ಮಗಳಲ್ಲಿ ಜೈನಧರ್ಮವೂ ಒಂದು. ಕ್ರಿ.ಪೂ. 6ನೇ ಶತಮಾನದಲ್ಲಿ ಜೈನಧರ್ಮ

ವಿಕಾಸವಾಯಿತು ಎನ್ನುತ್ತಾರೆ. ಭಾರತೀಯ ಇತಿಹಾಸಜ್ಞ 'ಹೆನ್ರಚ್ ಜಿಮ್ಮರ್' ಜೈನಧರ್ಮವು ಭಾರತೀಯ ಧಾರ್ಮಿಕ ಸಿದ್ಧಾಂತಗಳಲ್ಲೇ ಅತಿ ಪುರಾತನವಾಗಿದ್ದು, ಕ್ರಿ.ಪೂ. 400ರ ಸಿಂಧೂ ಕಣಿವೆ ನಾಗರೀಕತೆಯಷ್ಟು ಪ್ರಾಚೀನವಾದುದ್ದು ಎಂದು ಅಭಿಪ್ರಾಯ ಪಡುತ್ತಾರೆ. ಈ ಮೇಲಿನ ಹೇಳಿಕೆಯಂತೆ ಭಾರತದಲ್ಲಿ ಜೈನ ಪರಂಪರೆಯು ಅತಿ ಪ್ರಾಚೀನವಾದದ್ದು, ಮೊದಲನೆಯ ತೀರ್ಥಂಕರ ಆದಿನಾಥರೇ ಈ ಧರ್ಮದ ಆದ್ಯಪ್ರವರ್ತಕರು. ವಿದೇಶಿ ಮೂಲದ ಆರ್ಯರು ಭಾರತಕ್ಕೆ ಬರುವ ಮೊದಲೇ ಜೈನಧರ್ಮವು ಅಸ್ತಿತ್ವದಲ್ಲಿತ್ತೆಂದು ಹರಪ್ಪ ಮತ್ತು ಮೊಹಂಜದಾರೋಗಳಲ್ಲಿ ದೊರೆತ ಅವಶೇಷಗಳಿಂದ ಗುರುತಿಸಬಹುದು.

ಜೈನಧರ್ಮವೂ ಯಾವಾಗಲೂ ಕರ್ಮಸಿದ್ಧಾಂಥದ ಬಗೆಗೆ ಪ್ರಬಲವಾಗಿಯೇ ಪ್ರತಿಪಾದಿಸುತ್ತದೆ. ಹಾಗಾಗಿಯೇ, ಇದು ಪ್ರತಿಯೊಂದು ಜೀವಿಯಲ್ಲೂ ಕೂಡ ಮೂಲಭೂತ ಸಾಮಾನ್ಯ ಅಂಶಗಳನ್ನು ಒಳಗೊಂಡಿರುತ್ತದೆ. ಆದ್ದರಿಂದ ಇದು ಒಂದೇ ಕೋಶವೇ ಆಗಿರುತ್ತದೆ. ಪ್ರತಿಯೊಂದು ಜೀವಿಯೂ ಸಂಯೋಗ, ಸಂತಾನೋತ್ಪತಿ ಅಥವಾ ಭೌತಿಕ ಸ್ವಾಧೀನದ ಮೂಲಕ ಹೆಚ್ಚಿನ ಕೋಶಗಳನ್ನು ಪಡೆಯಲು ಅಥವಾ ತನ್ನದೇ ಆದಂಥ ಕೋಶವನ್ನು ಅಭಿವೃದ್ಧಿ ಪಡಿಸಲು ಪ್ರಯತ್ನಿಸುತ್ತದೆ. ಹಾಗಾಗಿ ಪ್ರತಿಯೊಂದು ಜೀವಿಗೂ ಹಣದಂಥ ನಿರ್ಜೀವ ಜೀವಕೋಶಗಳು ಇರುತ್ತವೆ. ಅದು ಹೆಚ್ಚು ಕೋಶಗಳನ್ನು ಪಡೆಯಲು ಸಹಾಯಕವಾಗುತ್ತದೆ. ಹೆಚ್ಚು ಹೆಚ್ಚು ಸ್ವಾಧೀನ ಪಡಿಸಿಕೊಳ್ಳಲು ಈ ಪ್ರಕ್ರಿಯೆಯನ್ನು ಪ್ರರಿಗ್ರಹ ಅಥವಾ ಕ್ರೋಢೀಕರಣ ಎಂದೇ ಕರೆಯಲಾಗುತ್ತದೆ.

ಜೈನಧರ್ಮವು ಪ್ರಧಾನವಾಗಿ ಅಂಹಿಸೆಯ ಬಗೆಗೆ ಪ್ರತಿಪಾದಿಸುವ ಮೂಲಕ ಚಾಲ್ತಿಯಲ್ಲಿ ಇರಬೇಕು ಎಂಬುದೇ ಈ ಧರ್ಮದ ಆಶಯವಾಗಿರುತ್ತದೆ. ಇದರ ಅರ್ಥವನ್ನು ವಿಶ್ವದಲ್ಲಿ ಕಡಿಮೆ ಪ್ರಮಾಣದಲ್ಲಿ ಅನುಷ್ಠಾನಕ್ಕೆ ತರಲಾಗಿದೆ. ಹಾಗೆಯೇ, ಇದನ್ನು ನಾಶಪಡಿಸುವಂಥ ಹುನ್ನಾರವೇ ಈ ಜಗತ್ತಿನಲ್ಲಿ ಹೆಚ್ಚು ನಡೆದಿರುತ್ತದೆ. ಈ ಧರ್ಮವು ಯಾರು ಆಸ್ತಿಯನ್ನು ಅಥವಾ ಸಂಪತ್ತನ್ನು ಇನ್ಯಾವುದನ್ನು ಹೆಚ್ಚಿನ ರೀತಿಯಲ್ಲಿ ಗಳಿಸುವ ಬದಲು ಇರುವುದನ್ನು ನೀಡುವಂಥ ಮನಸ್ಸನ್ನು ಹೊಂದಬೇಕು ಅಥವಾ ಆ ಮಾದರಿಯ ಪ್ರವೃತ್ತಿಯನ್ನು ರೂಢಿಸಿ ಬೆಳೆಸಿಕೊಳ್ಳಬೇಕು. ಅಪರಿಗ್ರಹವು ಮೂಲಭೂತವಾಗಿ ಪರಿಗ್ರಹಕ್ಕೆ ವಿರುದ್ಧವಾಗಿದೆ. ಅಂದರೆ, ಶೇಖರಣೆಯನ್ನು ನಿಲ್ಲಸಬಹುದು. ಮತ್ತೇ ಕಡಿಮೆ ಪ್ರಮಾಣದಲ್ಲಿ ಸಂಪಾದಿಸಬೇಕು. ಅದರಲ್ಲಿಯೇ ಸಂತೃಪ್ತಿಯನ್ನು ಕಾಣಬೇಕು. ಈ ಜೈನಧರ್ಮದಲ್ಲಿ ಬಹುಮುಖ್ಯವಾಗಿ ಕಡಿಮೆ ಹಿಂಸೆ, ಕಡಿಮೆ ವಿಕಾಶ ಮತ್ತು ಕಡಿಮೆ ಹತ್ಯೆ ಇರುತ್ತದೆ. ಹಾಗೆಯೇ, ಲೌಕಿಕ ಐಷಾರಾಮಿಗಳಿಲ್ಲದೇ ಬದುಕುವುದು ಈ ಮಾನವ ಕುಲಕ್ಕೆ ಮಾರ್ಗದರ್ಶಿಯಾಗಿದೆ. ಈಗಿರುವ ಜಾಗತಿಕ ಸಂದಿಗ್ಧತೆಯನ್ನು ಸರಿಪಡಿಸುವಂಥ ಮಾರ್ಗ ಮತ್ತು

ಚಿಕಿತ್ಸೆಯೂ ಈ ಜೈನಧರ್ಮದ ತತ್ತ್ವ ಸಿದ್ಧಾಂತಗಳಲ್ಲಿದೆ ಎಂಬುದನ್ನು ಮಾನವ ಸಮಾಜವು ಅರಿತು ಬದುಕನ್ನು ಕಟ್ಟುಕೊಳ್ಳಬೇಕಾಗಿದೆ.

ಜೈನ ಸಿದ್ಧಾಂತವು ಹಿಂದೂ ಧರ್ಮದಿಂದ ಪೂರ್ಣವಾಗಿ ಬಿಡುಗಡೆ ಹೊಂದಿದ ಒಂದು ನಂಬಿಕಾ ವಿಧಾನವಾದರೂ ಕರ್ಮದ ನಿಯಮ ಮತ್ತು ಜೀವನ್ಮುಕ್ತಿ ವಿಚಾರಗಳಲ್ಲಿ ಸಮನ್ವಯ ಪಾಲುದಾರಿಕೆ ಹೊಂದಿದೆ. ಕರ್ಮದ ಮೇಲೆ ಪರಿಣಾಮ ಉಂಟುಮಾಡುವಂಥ ವ್ಯಕ್ತಿಯ ನಂಬಿಕೆ–ಅಪನಂಬಿಕೆ ನಡವಳಿಕೆಗಳು, ಆನಂದ–ನೋವಿನ ಸಾಮರ್ಥ್ಯಗಳು, ಜಾತಿಗಳು, ದೈಹಿಕ ಮತ್ತು ಮಾನಸಿಕ ನಡವಳಿಕೆಗಳ ಜೊತೆಯಲ್ಲಿ ವ್ಯಕ್ತಿಯ ಜೀವಿತದ ಅವಧಿಯಂಥ ಅಂಶಗಳನ್ನು ಜೈನಧರ್ಮ ಮಾನ್ಯ ಮಾಡಿದೆ. ಭೌತಿಕ , ಮಾನಸಿಕ ಮತ್ತು ಐಹಿಕ ಅಂಶಗಳಿಂದ ಮುಕ್ತಿ ಪಡೆಯಲು ಜೈನರು ಮಾಡಿದ ಪ್ರಯತ್ನಗಳು ದೈವದ ಅಥವಾ ವೇದದ ಸಹಾಯವನ್ನು ಅವಲಂಬಿಸಿರಲಿಲ್ಲ. ಏಕೆಂದರೆ ಜೈನರಿಗೆ ದೇವರ ಅಸ್ತಿತ್ವದಲ್ಲಾಗಲಿ ಅಥವಾ ಆಧ್ಯಾತ್ಮದ ಉನ್ನತಿಯಲ್ಲಾಗಲಿ ನಂಬಿಕೆ ಇರಲಿಲ್ಲ. ಜೈನರು ನಿರೀಶ್ವರವಾದಿಗಳು. ಜೊತೆಗೆ ವೇದ ಪ್ರಾಮಾಣ್ಯವನ್ನು ನಿರಾಕರಿಸುವ ನಾಸ್ತಿಕರೂ ಹೌದು. ಆದರೆ ಧರ್ಮ ನಿರಪೇಕ್ಷವಾದಿಗಳಲ್ಲ. ಜೈನ ಎನ್ನುವುದು ವೈರಾಗ್ಯಪರ ಧೋರಣೆಯುಳ್ಳದ್ದು. ಜೈನಧರ್ಮವು ಸೃಷ್ಟಿಕರ್ತನೆಂದು ಯಾವೊಬ್ಬ ದೇವರನ್ನೂ ಅಂಗೀಕರಿಸಿಲ್ಲ. ಆದುದ್ದರಿಂದ ಅಂಥ ದೇವರಲ್ಲಿ ಭಕ್ತಿಯನ್ನು ತೋರಿಸುವ ಆಸಕ್ತಿ ಆ ಧರ್ಮದಲ್ಲಿ ಏರ್ಪಟ್ಟಿಲ್ಲ. ಆದರೆ ಕರ್ಮಗಳನ್ನೆಲ್ಲಾ ಸಂಪೂರ್ಣವಾಗಿ ಜಯಿಸಿ ಸಾಂಸಾರಿಕ ಬಂಧಗಳನ್ನು ಕಿತ್ತೊಗೆದು ಆತ್ಮವು ಅನಂತ ದರ್ಶನ, ಅನಂತ ಜ್ಞಾನ, ಅನಂತ ಸುಖ ಮತ್ತು ಅನಂತ ಶಕ್ತಿಗಳಿಂದ ಸಮ್ಮಿಳನವಾಗಿ ಸಿದ್ಧಪರಮೇಷ್ಠಿಯಾಗಿ ತನ್ನ ಪರಿಶುದ್ಧ ಸ್ವರೂಪದಲ್ಲಿರುತ್ತದೆ ಎಂದು ನಂಬಿ ಬಾಳುವವರೇ ಜಿನರು. ಮುಕ್ತಿಯನ್ನು ಬಯಸುವ ಪ್ರತಿಯೊಬ್ಬ ಮಾನವನ ಆದರ್ಶದ ರೂಪವಾಗಿ ಜಿನರಿದ್ದಾರೆ. ಈ ಧರ್ಮದ 24 ತೀರ್ಥಂಕರರು, ಯತಿಗಳು ಜೈನಧರ್ಮದ ಪವಿತ್ರ ವ್ಯಕ್ತಿಗಳೆನಿಸುವರು.

ಸಿದ್ಧಿ ಪಡೆದ ತೀರ್ಥಂಕರರ ಯತಿಗಳ ಜೀವ ಸ್ವರೂಪವನ್ನು ತಿಳಿದು ಅವರಂತೆ ಪರಿಶುದ್ಧನಾಗಲು ವ್ಯಕ್ತಿ ಸಾಧನೆ ಮಾಡುವ ಮಾರ್ಗವೇ ಭಕ್ತಿ. ಅದರಲ್ಲೂ ಪ್ರಮುಖವಾಗಿ ಸಮ್ಯಕ್ ದರ್ಶನ, ಸಮ್ಯಕ್ ಜ್ಞಾನ, ಸಮ್ಯಕ್ ಚಾರಿತ್ರ್ಯ ಎನ್ನುವ ರತ್ನತ್ರಯಗಳ ತಳಹದಿ ಭಕ್ತಿಗೆ ಅವಶ್ಯಕ ಎಂಬುದು ಜೈನಧರ್ಮದ ಪ್ರಬಲವಾದಂಥ ಪ್ರತಿಪಾದನೆಯೇ ಆಗಿರುತ್ತದೆ. ಸಿದ್ಧಭಕ್ತಿ, ಶುತಭಕ್ತಿ, ಚಾರಿತ್ರ್ಯಭಕ್ತಿ, ಯೋಗಿಭಕ್ತಿ, ಆಚಾರ್ಯಭಕ್ತಿ, ನಿರ್ವಾಣಭಕ್ತಿ, ನಂದೀಶ್ವರಭಕ್ತಿ, ಚೈತ್ಯಭಕ್ತಿ, ಶಾಂತಿಭಕ್ತಿ, ಪಂಚಗುರುಭಕ್ತಿ, ತೀರ್ಥಂಕರಭಕ್ತಿ, ಸಮಾಧಿಭಕ್ತಿ ಎನ್ನುವ ಹನ್ನೆರೆಡು ಬಗೆಯ ಭಕ್ತಿಗಳನ್ನು ಜೈನಧರ್ಮಗ್ರಂಥಗಳು ನಿರೂಪಿಸುತ್ತವೆ. ನೀತಿ. ನ್ಯಾಯ, ರುಜುತ್ವ, ಸುಖ, ಶಾಂತಿ, ನೆಮ್ಮದಿಯಂಥವು ಊರ್ಧ್ವಮುಖವಾಗಿ ಗಟ್ಟಿಯಾಗಿ ಅಧಿಕವಾಗುತ್ತಾ ಹೋಗುವ ಕಾಲವನ್ನು ಪವಿತ್ರಕಾಲ ಅಥವಾ ಶುಭಕಾಲ ಅಥವಾ ಉತ್ಸರ್ಪಿಣಿ ಎಂದೂ ಕರೆಯುತ್ತಾರೆ. ಅದೇ

ಅಪಕರ್ಷಿಸುವ ಕಾಲವನ್ನು ಅಪವಿತ್ರ ಕಾಲ ಅಥವಾ ಅಪಸರ್ಪಿಣಿ ಕಾಲವೆಂದೂ ಜೈನಧರ್ಮ ವಿಂಗಡಿಸುತ್ತದೆ.

ಜೈನಧರ್ಮ ವೇದ ಪ್ರಾಮಾಣ್ಯವನ್ನು, ಯಜ್ಞಯಾಗಾದಿಗಳನ್ನು, ಬ್ರಾಹ್ಮಣೀಯ ಯಾಜಮಾನ್ಯವನ್ನು ತಿರಸ್ಕರಿಸಿದ್ದರಿಂದ ಅದನ್ನು ಅಸಂಪ್ರದಾಯಿಕ ಧರ್ಮ ಅಥವಾ ನಾಸ್ತಿಕಧರ್ಮ ಎಂದು ಪರಿಗಣಿಸಲಾಯಿತು. ಜೈನರು ದೇವರ ಅಸ್ತಿತ್ವವನ್ನು ಅಲ್ಲಗಳೆಯುತ್ತಾರೆ. ಅದಕ್ಕೆ ಅವರು ಕೊಡುವ ಆಧಾರಗಳು ಸತ್ಯವಲ್ಲವೇ ಎನಿಸುತ್ತವೆ. 'ದೇವರು ಸೃಷ್ಟಿ ಮಾಡಲು ಪ್ರಕೃತಿಯನ್ನು ಅವಲಂಬಿಸುತ್ತಾನೆಂದೂ, ಪ್ರಕೃತಿ ಮಾತ್ರ ಯಾರಿಂದಲೂ ಸೃಷ್ಟಿಯಾಗಿಲ್ಲವೆಂದು ಆಸ್ತಿಕರು ನಂಬುವುದಾದರೆ; ಪ್ರಪಂಚವು ಯಾರಿಂದಲೂ ಸೃಷ್ಟಯಾಗಿಲ್ಲ ಎಂದೇಕೆ ಅವರು ನಂಬಬಾರದು? ದೇವರು ನಿತ್ಯ ತೃಪ್ತನಾಗಿದ್ದರೆ ಯಾವ ಆಸೆಯನ್ನು ತೀರಿಸಿಕೊಳ್ಳಲು ಅವನು ಈ ಪ್ರಪಂಚವನ್ನು ಸೃಷ್ಟಿಸಿದ? ಒಂದು ವೇಳೆ ತನ್ನ ವಿನೋದಕ್ಕಾಗಿ ಈ ಪ್ರಪಂಚವನ್ನು ಸೃಷ್ಟಿಸಿದ್ದರೆ, ಅವನಿಗೆ ಬಾಲಿಶ ಬುದ್ಧಿಯಿದೆ. ಅವನಲ್ಲಿ ಸರ್ವಜ್ಞತ್ವವಿಲ್ಲ ಎನ್ನಬೇಕಾದೀತು' ಎನ್ನುವುದು ಅವರ ಅಭಿಪ್ರಾಯ.

ಜೈನಧರ್ಮದಲ್ಲಿ ದಿಗಂಬರ, ಶ್ವೇತಾಂಬರ, ಯಾಪನೀಯ, ಶಾಕ್ತದಂಥ ಪಂಥಗಳಿದ್ದು, ದೀಕ್ಷಾ ಸಂಪ್ರದಾಯದ ಮೂಲಕ ಸನ್ಯಾಸ ಜೀವನವನ್ನು ಮಹಿಳೆ ಮತ್ತು ಪುರುಷರಿಬ್ಬರು ನಡೆಸಲು ಅವಕಾಶವಿದೆ. ಇಂಥ ಜೀವನ ನಡೆಸುವ ಜೈನರನ್ನು ಸಾಧು, ಮುನಿ, ನಿರ್ಗ್ರಂಥಿ, ಸಾಧ್ವಿಯಂಥ ಹೆಸರುಗಳಿಂದ ಕರೆಯುತಾರೆ. ಸನ್ಯಾಸಕ್ಕಾಗಿ ಇರುವ ನಾನಾ ರೀತಿಯ ಉಪಾಸನಾ ಮಾರ್ಗಗಳಲ್ಲಿ ಧ್ಯಾನ ವಿಧಾನಗಳು ತಂತ್ರಗಳು ಮತ್ತು ದೇಹದಂಡನೆಗಳು ಮುಖ್ಯವಾದವು. ಸನ್ಯಾಸಿಗಳು ಮಸ್ತಕದ ಮತ್ತು ಮೈಮೇಲಿನ ಕೂದಲುಗಳನ್ನು ಕೀಳಿಸಿಕೊಳ್ಳುವುದು, ಸಲ್ಲೇಖನ ಎನ್ನುವ ನಿರಾಹಾರ ವ್ರತವನ್ನು ಹಿಡಿದು ದೇಹತ್ಯಾಗ ಮಾಡುವುದು. ಈ ತೆರೆನಾದಂಥ ದೇಹದಂಡನೆಯೂ ಅತೀಯಾದ ಅಹಿಂಸೆಯೂ ಜೈನಧರ್ಮದಲ್ಲಿ ಸಾಮಾನ್ಯವೇ ಆಗಿರುತ್ತದೆ. ಪ್ರಪಂಚದಲ್ಲಿರುವ ಧರ್ಮಗಳಲ್ಲಿ ವ್ರತಗಳ ಮೂಲಕ ಸಾವನ್ನು ಆಹ್ವಾನಿಸುವ ಏಕೈಕ ಧರ್ಮವೆಂದರೆ ಅದು ಜೈನಧರ್ಮ.

ಅಹಿಂಸೆಯ ಭದ್ರಬುನಾದಿಯ ಮೇಲೆ ರೂಪಿತವಾಗಿರುವ ಅನಾದಿಕಾಲದಿಂದಲೂ ತನ್ನ ಅಸ್ತಿತ್ವವನ್ನು ಉಳಿಸಿಕೊಂಡು ಬಂದಿರುವ ಶಾಂತಿಯ ಸಂಕೇತವಾದ ಜೈನಧರ್ಮ ವಿಶ್ವದ ಸಕಲ ಜೀವರಾಶಿಗಳಿಗೆ ಹಿತವನ್ನು ಬಯಸುವುದರೊಂದಿಗೆ ಅವಕ್ಕೆ ನಿತ್ಯಕರ್ಮ ಸುಖದ ಮಾರ್ಗೋಪಾಯಗಳನ್ನು ಬೋಧಿಸುತ್ತದೆ. ಜಿನರಿಂದ ಜನ್ಮ ತಳೆದ ಈ ಧರ್ಮ ಒಂದು ಕಾಲಕ್ಕೆ ಜನಸಾಮಾನ್ಯರ ಧರ್ಮವಾಗಿ ಉತ್ತುಂಗದ ಹಂತ ತಲುಪಿತ್ತು. ಕನ್ನಡನಾಡು ಜೈನಧರ್ಮ ಸಂಸ್ಕೃತಿಯ ಬೀಡಾಗಿ ಅನಾದಿಕಾಲದಿಂದಲೂ ಉಳಿದುಬಂದಿದೆ. ಕನ್ನಡ ನುಡಿ ಜೈನ ಸಾಹಿತ್ಯದ ತವರೂರಾಯಿತು. ಕನ್ನಡ ನಾಡು, ನುಡಿ, ಸಾಹಿತ್ಯ, ಶಿಲ್ಪಕಲೆ, ಸಂಗೀತ,

ನೃತ್ಯ, – ಹೀಗೆ ಸರ್ವತೋಮುಖ ಏಳಗೆಗೆ ಜೈನರು ಬಹು ವಿಧವಾಗಿ ಶ್ರಮಿಸಿರುವ ಉದಾಹರಣೆಗಳು ಹಲವು ಹತ್ತು ಕಂಡುಬರುತ್ತವೆ. ರಾಷ್ಟ್ರಕೂಟರು, ಗಂಗರಸರು, ಹೊಯ್ಸಳರು, ಚಾಲುಕ್ಯರಂಥ ರಾಜಮನೆತನಗಳು ಕರ್ನಾಟಕದ ಆಧಾರಸ್ತಂಭಗಳು. ಇವರ ಕಾಲದಲ್ಲಿ ಧರ್ಮ, ಸಾಹಿತ್ಯ, ಕಲೆ, ಸಂಸ್ಕೃತಿಗಳು ಏಳಗೆ ಹೊಂದಿದ್ದವು. ಜೈನಧರ್ಮದ ಧಾರ್ಮಿಕ ತಳಹದಿಯ ಮೇಲೆ ಕನ್ನಡನಾಡಿನಲ್ಲಿ ರಾಜಕೀಯ ಮತ್ತು ಸಾಮಾಜಿಕ ರಚನೆಯ ಕಾರ್ಯವೂ ಆರಂಭವಾಯಿತು.

ಶ್ರವಣಬೆಳಗೊಳ, ಪುಲಿಗೆರೆ, ಕೊಪ್ಪಳ, ಬ್ರಹ್ಮಗಿರಿ, ಬಳ್ಳಿಗಾವೆ, ತಾಳಗುಂದ, ಐಹೊಳೆ, ಬನವಾಸಿ, ಕಾರ್ಕಳ, ಹುಂಚ, ಮೂಡಬಿದ್ರೆ, ಗೇರುಸೊಪ್ಪನಂಥ ಕ್ಷೇತ್ರಗಳಲ್ಲಿ ವಿದ್ಯಾಕೇಂದ್ರಗಳು ಹುಟ್ಟಿಕೊಂಡವು. ಧರ್ಮ ಪ್ರಸಾರದೊಟ್ಟಿಗೆ ಸಾಹಿತ್ಯ ಸೇವೆಯೂ ನಡೆದು ಕವಿಗಳು, ವಿದ್ವಾಂಸರು ಮಹಾಕಾವ್ಯಗಳನ್ನು ರಚಿಸಿದರು. ರಾಷ್ಟ್ರಕೂಟ ರಾಜನ ಆಸ್ಥಾನದ ಕವಿ ಶ್ರೀ ವಿಜಯನು ಬರೆದ ಕವಿರಾಜಮಾರ್ಗ ಕನ್ನಡದ ವಿಸ್ತಾರವನ್ನೊಳಗೊಂಡ ಕನ್ನಡದ ಮೊದಲ ಗ್ರಂಥ. ಶಿವಕೋಟ್ಯಾಚಾರ್ಯರ ವಡ್ಡಾರಾಧನೆ ಜೈನಧರ್ಮದ ಸಂದೇಶವನ್ನು ಸಾರುವ ಉಪಸರ್ಗಕೇವಲಿಗಳ ಕಥೆ. ಅನಂತರ ಪಂಪ, ಪೊನ್ನ, ರನ್ನ ಜನ್ನ, ಚಾವುಂಡರಾಯರಂಥ ಮಹಾನೀಯರು ರಚಿಸಿರುವಂಥ ಕಾವ್ಯಗಳು. ಸಮಂತ ಭದ್ರರು, ಭಟ್ಟಾಕಲಂಕರು, ಪೂಜ್ಯಪಾದರು, ಸಿಂಹನಂದಿಗಳಂಥ ಆಚಾರ್ಯರು ಬರೆದಿರುವ ಕಾವ್ಯಗಳು, ಪುರಾಣಗಳು, ಸಿದ್ಧಾಂತಗಳಿಂದ ಕನ್ನಡದ ಪ್ರೌಢಿಮೆಯನ್ನು ತಳಸ್ಪರ್ಶಿಯಾಗಿ ತಿಳಿಯಬಹುದು. ಹೀಗೆ ಕನ್ನಡ ಸರಸ್ವತಿಯನ್ನು ಜೈನರು ಅನೇಕ ಗ್ರಂಥರತ್ನಗಳಿಂದ ಅಲಂಕರಿಸಿದ್ದಾರೆ ಎಂಬುದನ್ನು ಹಲವು – ಹತ್ತು ಸಾಹಿತ್ಯ ಪ್ರಕಾರಗಳಲ್ಲಿ ಪ್ರಧಾನವಾಗಿಯೇ ಗುರುತಿಸಬಹುದು.

ಕರ್ನಾಟಕದ ಕಲೆ ವಾಸ್ತುಶಿಲ್ಪಗಳಿಗೆ ಜೈನರ ಕಾಣಿಕೆ ಅಪಾರವಾದದ್ದು. ಇವರಿಂದ ಶಿಲ್ಪಕಲೆಗೆ ಒಂದು ಹೊಸರೂಪ ಬಂದಿದ್ದು ಅದು ಅಚ್ಚಳಿಯದೆ ನಿಂತಿದೆ ಎಂಬುದಕ್ಕೆ ಪ್ರಪಂಚದ ಆಶ್ಚರ್ಯವೆನಿಸಿದಂಥ ಶ್ರವಣಬೆಳಗೊಳದ ಗೊಮ್ಮಟೇಶ್ವರಮೂರ್ತಿಯ ಸ್ಥಾಪನೆಯನ್ನು ಜೈನವೀರ ಚಾವುಂಡರಾಯನು ಸರಿಸುಮಾರು ಒಂದು ಸಾವಿರ ವರ್ಷಗಳ ಹಿಂದೆಯೇ ಮಾಡಿಸಿ ಅಜರಾಮರ ಕೀರ್ತಿಗೆ ಪಾತ್ರವಾಗಿರುವುದು ಸಾಕ್ಷಿಯಾಗಿದೆ. ಮೂಡುಬಿದಿರೆಯ ಸಾವಿರ ಕಂಬದ ಬಸದಿ, ಕಾರ್ಕಳ, ವೇಣೂರಿನ ಧರ್ಮಸ್ಥಳದ ಬಾಹುಬಲಿಗಳು, ಬಾದಾಮಿಯ ಮೇಣ ಬಸದಿಗಳು, ಅಜಂತ ಎಲ್ಲೋರದ ವರ್ಣಚಿತ್ರಗಳು, ಹಳೇಬೀಡು ಬೇಲೂರಿನ ಶಿಲ್ಪಕಲೆ ಇವಲ್ಲದೆ ಸಾವಿರಾರು ಬಸದಿಗಳು, ಮೂರ್ತಿಗಳು, ಮಾನಸ್ತಂಭಗಳು, ಕೆರೆಕಟ್ಟೆಗಳು ಇಂದಿಗೂ ಕೂಡ ಕನ್ನಡನಾಡಿನ ಹೆಮ್ಮೆಯ ಆಸ್ತಿಯಾಗಿ ಜೈನರ ಹಿರಿಮೆಯನ್ನು ಸಾರುತ್ತಾ ಕಂಗೊಳಿಸುತ್ತಿವೆ.

ಜೈನ ಮಹಿಳೆಯರು ದಾನ ಚಿಂತಾಮಣಿಗಳೆನಿಸಿದ್ದಾರೆ. ಸಂಗೀತ, ನೃತ್ಯದಲ್ಲಿ ಪ್ರವೀಣರಾಗಿದ್ದು ದಾನ ದತ್ತಿಯಂಥ ಕ್ರಿಯೆಗಳಿಂದಲೂ ಆದರ್ಶರಾಗಿದ್ದಾರೆ. ಅತ್ತಿಮಬ್ಬೆ, ಮಲ್ಲಿಕಬ್ಬೆ, ಜಕ್ಕೆಯಬ್ಬೆ,

ಶಾಂತಳಾದೇವಿಯಂಥವರು ಜೈನ ನಾರೀರತ್ನಗಳೆನಿಸಿದ್ದಾರೆ. ಈಗಲೂ ಕರ್ನಾಟಕದಲ್ಲಿ ಪೂಜ್ಯ ವಿದ್ಯಾಸಾಗರರು, ವಿದ್ಯಾನಂದಿಯಂಥ ಜೈನಾಚಾರ್ಯರು ಇದ್ದಾರೆ. ಆ.ನೇ.ಉಪಾದ್ಯೆ, ತುಕೋಳ್, ವರ್ಧಮಾನಶಾಸ್ತ್ರಿಗಳು, ಸುಬ್ಬಯ್ಯಶಾಸ್ತ್ರಿಗಳಂಥ ಮಹಾನ್ ವಿದ್ವಾಂಸರಿದ್ದಾರೆ. ಶ್ರೀ ಅನಂತರಾಜಯ್ಯ ಅ'ವರು, ಶ್ರೀಮಾನ್ ವೀರೇಂದ್ರ ಹೆಗ್ಗಡೆಯಂಥ ದಾನಶೀಲರು, ಅನೇಕ ಉತ್ತಮ ಉದಾರಿ ಶ್ರಾವಕರು, ಪೂಜ್ಯ ಭಟ್ಟಾರಕರು, ಜೈನ ಮಹಿಳೆಯರು ಇವರೆಲ್ಲರೂ ಜೀನ ಧರ್ಮದ ಏಳಿಗೆಗಾಗಿ ಅಷ್ಟೇ ಅಲ್ಲದೆ ಕನ್ನಡನಾಡಿನ ಏಳಿಗೆಗಾಗಿ ಶ್ರಮಿಸುತ್ತಿದ್ದಾರೆ. ಜೈನಧರ್ಮವನ್ನು (ರಿಲೀಜಿಯನ್) ಧರ್ಮ ಎಂಬ ಪರಿಕಲ್ಪನೆಯಾಚೆ ಒಬ್ಬ ವ್ಯಕ್ತಿ ಪ್ರತ್ಯೇಕವಾಗಿ ಇಷ್ಟಾರ್ಥ ಸಾಧನೆಗಾಗಿ ಆಧರಿಸಿರುವ ಮಾರ್ಗ ಎನ್ನಬಹುದು. ಆ ಮಾರ್ಗದಲ್ಲಿ ಸಿಧ್ಧಾಂತ, ನಿಯಮ, ತತ್ವ, ಆಚರಣೆ ಎನ್ನುವ ತಂಗುದಾಣಗಳದ್ದು ಅವು ಮುಕ್ತಿಗೆ ದಾರಿಯನ್ನು ತೋರಿಸುತ್ತಿವೆ.

ಕರ್ನಾಟಕದಲ್ಲಿ ಒಂದೊಮ್ಮೆ ಉತ್ತುಂಗಶಿಕರವೇರಿದ್ದ ಜೈನಧರ್ಮ ಇಂದು ಆ ಉತ್ತುಂಗತೆ ಇಲ್ಲದಿದ್ದರೂ ಅದರ ಕಾವು ಕಡಿಮೆಯಾಗಿಲ್ಲ. ಕೊಂಚ ಮಸಕುತನವಿದ್ದರೂ ತನ್ನ ಅಸ್ತಿತ್ವದ ಕಳೆಯನ್ನು ಕಳೆದು ಕೊಳ್ಳದೆ ಇಂದಿಗೂ ಜೀವಂತವಾಗಿದೆ. ತನ್ನ ಇರುವಿಕೆಯ ದ್ಯೋತಕವಾಗಿ ಕರ್ನಾಟಕದ ಅನೇಕ ನಗರ–ಪಟ್ಟಣಗಳಲ್ಲಿ ಜೈನ ಪಂಥದ ಜನರಿದ್ದಾರೆ. ಅವರು ಆ ಧರ್ಮದನ್ವಯವೇ ಬದುಕು ಸಾಗಿಸುತ್ತಿರುವುದು.

ಆಧುನೀಕರಣ ಮತ್ತು ಜಾಗತೀಕರಣದ ಹೊಡೆತ ಎಲ್ಲಾ ಧರ್ಮಗಳ ಮೇಲಾದಂತೆ ಜೈನಧರ್ಮವನ್ನೂ ಬಿಡದೇ ಕಾಡುತ್ತಿದೆ. ಅದರ ಮಧ್ಯೆಯೂ ಪಾಶ್ಚ್ಯಾತೀಕರಣಕ್ಕೆ ಒಳಗಾಗಲು ಮುಂದಾಗುವ ಮನಸ್ಸುಗಳ ಹಪಾಹಪಿಯ ನಡುವೆ ತಮ್ಮೆಲ್ಲಾ ಆಚಾರ–ವಿಚಾರಗಳನ್ನು ಚಾಚು ತಪ್ಪದೇ ಜೈನರು ಕಡ್ಡಾಯವಾಗಿ ಅನುಸರಿಸುತ್ತಾ ಇಂದಿಗೂ ಬಂದಿರುವುದನ್ನು ಗುರುತಿಸಬಹುದು. ಬದಲಾವಣೆಯ ಕಾಲಚಕ್ರದಲ್ಲಿಯೂ ತಮ್ಮ ಧರ್ಮದ ಮೂಲ ಸೊಗಡನ್ನು ಬಿಟ್ಟಿಲ್ಲ. ಜೈನಧರ್ಮದ ತತ್ವ–ನಿಯಮ–ಸಿದ್ದಾಂತಗಳು ಒಬ್ಬ ಮನುಷ್ಯನೊಂದಿಗೆ ಭಾವನಾತ್ಮಕವಾಗಿ ಬೆಸೆಯುತ್ತದೆ ಎಂಬುದಕ್ಕೆ ಇತ್ತೀಚೆಗೆ ಹದಿಹರೆಯಕ್ಕೆ ಕಾಲಟ್ಟ ಜೈನ ಯುವತಿಯರನೇಕರು ದೀಕ್ಷೆಯನ್ನು ಸ್ವಯಂ ಆಗಿ ಪಡೆದುಕೊಳ್ಳುತ್ತಿರುವುದೇ ಉತ್ತಮ ನಿದರ್ಶನ. ಸಮಾಜದಲ್ಲಿ ದ್ವಿತೀಯ ದರ್ಜೆಯವಳೆನಿಸಿಕೊಂಡು ಅನೇಕ ಸಾಮಾಜಿಕ ಕಟ್ಟುಪಾಡುಗಳ ಸಂಕೋಲೆಗಳಲ್ಲಿ ನಲುಗಿದ ಮಹಿಳೆ ತನ್ನೀಹಿಂಸಿಸುವ ಸ್ಪಂದನಾರಹಿತ ಸಮಾಜದಲ್ಲಿ ಒಂದು ಧರ್ಮದ ಆಶಯಗಳನ್ನು ಆಶ್ರಯಿಸಿ ನೆಮ್ಮದಿಯ ಮುಕ್ತಿಯನ್ನು ಕಾಣಲು ತವಕಿಸುತ್ತಿದ್ದಾಳೆ. ಅದುವೇ, ಜೈನಧರ್ಮ ಮಾನವರಿಗೆ ಸಂಗಾತಿಯೋಪಾದಿಯಲ್ಲಿ ಪೋರೆಯುತ್ತಿದೆ ಎಂಬುದನ್ನು ಅರ್ಥಮಾಡಿಕೊಳ್ಳಬೇಕಾಗಿದೆ. ಹೆಚ್ಚುತ್ತಿರುವ ಜೈನ ಬಾಲಕಿಯರ ಧರ್ಮ ದೀಕ್ಷೆಯ ಸ್ವೀಕಾರವೂ

ಪ್ರಮುಖವಾಗಿ ಸಂಸಾರಗೊಡವೆಯನ್ನು ತಿರಸ್ಕರಿಸಿ ಅಂಥ ಪಾರಂಪರಿಕ ಆಚರಣೆಯಿಂದ ಹೊರಬಂದ ನಿರಾಳತೆಯ ಅಭಿವ್ಯಕ್ತಿಯಾಗಿದೆ. ಮಹಿಳೆಯೊಬ್ಬಳು(ಜೈನ) ಉಸಿರುಗಟ್ಟಿಸುವ ವಾತಾವರಣದಿಂದ ಮುಕ್ತಿ ಪಡೆಯಲು ಇಚ್ಛಿಸಿ ಬಯಸಿ ಬರುವ ಏಕೈಕ ಧರ್ಮವಾಗಿ ಜೈನಧರ್ಮ ಇಂದು ಬಿಂಬಿತವಾಗುತ್ತಿದೆ.

ಆಧುನಿಕ ಶಿಕ್ಷಣಕ್ಕೆ ತೆರೆದುಕೊಳ್ಳುತ್ತಾ ಬದಲಾವಣೆಯ ಗಾಳಿಯನ್ನು ಸೋಂಕಿಸಿಕೊಳ್ಳುತ್ತಲೇ ತನ್ನ ಧರ್ಮದ ಅಸ್ತಿತ್ವವನ್ನು ಬಿಡದಂತೆ ಪಾಲಿಸುತ್ತಿರುವ ಹಲವು ಧರ್ಮಿಗರಲ್ಲಿ ಜೈನಧರ್ಮೀಯರು ಮುಖ್ಯರಾಗುತ್ತಾರೆ. ಜೈನಧರ್ಮದ ಆಚಾರ, ಆಚರಣೆ, ಪಂಥಾನುಯಾಯಿತನ, ಬೋಧನೆ, ದೀಕ್ಷಾ ಸಂಪ್ರದಾಯದ ಕಾರ್ಯವೂ ನಡೆಯುತ್ತಲೇ ಇದೆ. ಈ ಮಾತನ್ನು ಕರ್ನಾಟಕಕ್ಕಷ್ಟೇ ಸೀಮಿತಗೊಳಿಸದೆ ಜಗತ್ತಿಗೆ ವ್ಯಾಪಿಗೊಳಿಸಬಹುದು. ಅಲ್ಪಸಂಖ್ಯಾತತನವೊಂದನ್ನು ಬಿಟ್ಟರೆ ಇನ್ಯಾವುದರಲ್ಲಿಯೂ ಜೈನಧರ್ಮ ತನ್ನ ಮೂಲತ್ವ ಬಿಟ್ಟುಕೊಡದೆ ಈಗಲೂ ಜಗತ್ತನ್ನು ಬೆಳಗುವ ಧರ್ಮವಾಗಿ ಹೊರಹೊಮ್ಮುತ್ತಿದೆ.

ಜಗತ್ತಿನಲ್ಲಿ ಧರ್ಮವೂ ತನ್ನ ಮಾನವೀಯತೆಯ ಮೇಲೆ ಬಿಗಿಯಾದ ಹಿಡಿತವನ್ನು ಕಳೆದುಕೊಳ್ಳುತ್ತಿರುವ ಈ ಸಂದಿಗ್ಧತೆಯ ಕಾಲಘಟ್ಟದಲ್ಲಿ ಜೈನಧರ್ಮವು ಒಂದು ಪ್ರಧಾನವಾದಂಥ ಪಾತ್ರವನ್ನು ತನ್ನದೇ ಆದಂಥ ರೀತಿಯಲ್ಲಿ ನಿರ್ವಹಿಸುತ್ತದೆ. ಈ ಧರ್ಮದಲ್ಲಿನ ಕಡಿಮೆ ಸಂಖ್ಯೆಯ ಅನುಯಾಯಿಗಳ ಹೊರತಾಗಿಯೂ, ಇದು ಅನೇಕರನ್ನು ಪ್ರೇರೆಪಿಸುತ್ತಿದೆ ಮತ್ತು ಹೆಚ್ಚು ಪ್ರಭಾವಿಸಿರುತ್ತದೆ. ಆಧುನಿಕ ಕಾಲಸಂದರ್ಭದಲ್ಲಿ ಈ ಜೈನಧರ್ಮವು ಪುನರುಜ್ಜೀವನದ ಪ್ರಕ್ರಿಯೆಗೆ ಒಳಗಾಗಿದೆ. ಇದಕ್ಕೆ ಭಾಗಶಃ ಪಾಶ್ಚಿಮಾತ್ಯರ ಆಸಕ್ತಿಯೇ ಕಾರಣವಾಗಿದೆ. ಭಾರತದಲ್ಲಿನ ಸನಾತನೀಯ ಧಾರ್ಮಿಕ ಸಂಪ್ರದಾಯ ಜೈನಧರ್ಮದ ಬಗೆಗೆ ಇರುವಂಥ ಹಲವು ಹತ್ತು ವಿದ್ವಾತ್ಪೂರ್ಣ ಕೃತಿಗಳನ್ನು ರಚಿಸಲಾಗಿದೆ. ಹಾಗೆಯೇ ಪಾಶ್ಚತ್ಯರ ಲೇಖನಗಳು ಮತ್ತು ಭಾರತೀಯ ಜೈನರ ಜೈನಧರ್ಮವೂ ಜೀವನದ ಅವಿಭಾಜ್ಯ ದೃಷ್ಟಿಕೋನವನ್ನು ಹೊಂದಿದೆ ಎಂದು ತಿಳಿಸಿದ್ದಾರೆ. ಒಂದೇ ನಂಬಿಕೆ, ಅಪಾರವಾದಂಥ ಜ್ಞಾನವು ಮಾತ್ರ ನಮ್ಮನ್ನೂ ಮೋಕ್ಷದ ಹಾದಿಗೆ ಕೊಂಡೊಯ್ಯುತ್ತದೆ. ಈ ಧರ್ಮದಲ್ಲಿ ಪ್ರಧಾನವಾಗಿ ಮೂರು ಆಚರಣೆಗಳೇ ಇರುತ್ತವೆ. ಅವುಗಳೆಂದರೆ; ಸರಿಯಾದ ನಂಬಿಕೆ, ಸರಿಯಾದ ಜ್ಞಾನ ಮೋಕ್ಷದ ಹಾದಿಯನ್ನು ತೋರಿಸಲು ಸರಿಯಾದ ನಡವಳಿಕೆಯೂ ಇರಬೇಕು.

ಜೈನಧರ್ಮದಿಂದ ವಿಮೋಚನೆಯನ್ನು ಸಾಧಿಸಲು ಸಾಧ್ಯ ಎಂಬುದನ್ನು ಕಲಿಸುತ್ತದೆ. ಆ ಮೂಲಕ ವೈಯಕ್ತಿಕ ಪ್ರಯತ್ನಗಳ ಮೂಲಕ ಒಬ್ಬರ ಸಾಮಾರ್ಥ್ಯ, ಜೈನಧರ್ಮದ ಸಂದೇಶವು ಪ್ರಾಮಾಣಿಕ ಆಶಾಯದಿಂದ ತುಂಬುತ್ತದೆ. ಈ ಜೈನಧರ್ಮದ ತಿರುಳು ಅದರ ನೀತಿ, ಆದರ್ಶನೀಯ ತತ್ತ್ವಗಳು ಅಪಾರವಾದಂಥ ಪ್ರಭಾವ ಬೀರಿತ್ತು ಎಂದೇ ಹೇಳಬಹುದು. ಹೀಗೆ ಜೈನಧರ್ಮವೂ ಇಂದು ಹೆಚ್ಚು ಹೆಚ್ಚು ಪ್ರಭಾವಿಸುವ ಮೂಲಕ ಪ್ರಸ್ತುತವಾಗಿರುತ್ತದೆ.

**ಪರಾಮರ್ಶನ ಗ್ರಂಥಗಳು:**

1. ಶಾಮರಾಯ ತ.ಸು.; ಕನ್ನಡ ಸಾಹಿತ್ಯ ಚರಿತ್ರೆ; 2009.
2. ಯಳನಾಡು ಅಂಜನಪ್ಪ; ಧರ್ಮ ಮತ್ತು ಮುಕ್ತವಿಚಾರ; 2008.
3. ಸೀತಾರಾಮಯ್ಯ ವಿ. ; ಸಾಹಿತ್ಯ,ವಿಚಾರ,ವಿಮರ್ಶೆ; 2010.
4. ರಹಮತ್ ತರೀಕೆರೆ(ಸಂ); ಧರ್ಮ, 2000.
5. ವೀರಭದ್ರಪ್ಪ ಬಿ.ವಿ.; ಧರ್ಮ ಮತ್ತು ವೈಚಾರಿಕತೆ; 2001.
6. ರಾಜಾರಾಮ ಹೆಗಡೆ; ಲೌಕಿಕ-ಅಲೌಕಿಕ; 2001.
7. ಭಟ್ಟಾಚಾರ್ಯ ಬಿ.ಸಿ.; ದಿ ಜೈನ್ ಐಕನೋಗ್ರಫಿ; 1974.